ಶ್ರೀ ವಾಟಾಳ್ ನಾಗರಾಜ್ : ಚಾಮರಾಜ ನಗರದಲ್ಲಿನ ಕೊತ್ತಲವಾಡಿ ಗ್ರಾಮದಲ್ಲಿ ಒಂದು ಹಂದಿ ಕಡಿದು ಒಬ್ಬ ಸತ್ತಿದ್ದಾನೆ.

ಶ್ರೀ ಸಿದ್ದರಾಮಯ್ಯ : ಹಂದಿ ಕಡಿದ ತಕ್ಷಣ ಸಾಯುವುದಿಲ್ಲ, ಗಾಯ ಆದ ತಕ್ಷಣ ಯಾರೂ ಸಾಯುವುದಿಲ್ಲ. ಗಾಯ ಸುಟ್ಟು ಗ್ಯಾಂಗ್ರಿನ್ ಆಗಿ ಎಲ್ಲಾ ಇನ್‌ಫೆಕ್ಷನ್ ಆಗುವುದಕ್ಕೆ ಬಿಟ್ಟರೆ ಯಾರಾದರೂ ಸಾಯುತ್ತಾರೆ. ಆ ತರಹ ಸತ್ತಿರ ಬೇಕೇ ಹೊರತು, ಹಂದಿ ಕಡಿದ ತಕ್ಷಣ ಸತ್ತು ಹೋಗುತ್ತಾರೆಂದು ಇಲ್ಲ. ಹಾವು ಕಡಿದ ತಕ್ಷಣ ಸಾಯುವುದು, ಹುಚ್ಚು ನಾಯಿ ಕಚ್ಚಿದ ತಕ್ಷಣ ಸಾಯುವುದು ಈ ತರಹದ ತೀವ್ರ ಪರಿಣಾಮವಾಗುವುದಿಲ್ಲ. ಆದರೆ ಗಾಯ ಹಾಗೆ ಬಿಟ್ಟು ಔಷಧಿ ತೆಗೆದುಕೊಳ್ಳದೆ ಇದ್ದರೆ ಈ ಪರಿಸ್ಥಿತಿ ಆಗುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ : ಸೂಳ್ಯ ತಾಲ್ಲೂಕಿನ ಎಲಿಮೇಲಿ ಪರಿಸರದಲ್ಲಿ ಮತ್ತೆ ಮಂಗನ ಕಾಯಿಲೆ ಉಲ್ಬಣವಾಗಿದೆ. ಮೂರು ದಿವಸಗಳ ಹಿಂದೆ ಆ ವಿಚಾರವನ್ನು ನಮ್ಮ ಜಿಲ್ಲಾ ಆರೋಗ್ಯ ಅಧಿಕಾರಿಗಳ ಗಮನಕ್ಕೆ ತಂದರೆ ಯಾವ ಅಧಿಕಾರಿಗಳೂ ಅಲ್ಲಿಗೆ ಹೋಗಿಲ್ಲವೆಂದು ನಮಗೆ ತಿಳಿದು ಬಂದಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯಾ? ತಕ್ಷಣ ವ್ಯಾಪಕವಾದ ವ್ಯವಸ್ಥೆ ಮಾಡುವಂತಹ ಯೋಜನೆ ಸರ್ಕಾರದಲ್ಲಿ ಇದೆಯಾ?

ಡಾ|| ಹೆಚ್. ಸಿ. ಮಹದೇವಪ್ಪ : ಕಳೆದ ಬಾರಿ ಸದಸ್ಯರು ಹೇಳಿದ ತಕ್ಷಣವೇ ಅಡಿಷನಲ್ ಡೈರೆಕ್ಟರ್ ಆಫ್ ಕಮ್ಯುನಿಕಬಲ್ ಡಿಸೀಸ್ ಇವರನ್ನು ನೇರವಾಗಿ ಸ್ಥಳಕ್ಕೆ ಕಳುಹಿಸಿ ಅಲ್ಲಿ ಬೇಕಾದಂತಹ ಔಷಧೋಪಚಾರಗಳ ಮುಂಜಾಗ್ರತೆ ತೆಗೆದುಕೊಳ್ಳುವುದಕ್ಕೆ ಸೂಚನೆ ಕೊಟ್ಟು ಸ್ಥಳಕ್ಕೆ ಭೇಟಿ ಕೊಟ್ಟಿದ್ದೇನೆ. ಇನ್ನು ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಪುನಃ ಕಳುಹಿಸುತ್ತೇನೆ.

ವಯಸ್ಕರ ಶಿಕ್ಷಣ ಮತ್ತು ಸಾರ್ವಜನಿಕ ಗ್ರಂಥಾಲಯಗಳು

148 - ಶ್ರೀ ಎನ್. ಯೋಗೀಶ್‌ಭಟ್ (ಮಂಗಳೂರು) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ 1998-99ರಲ್ಲಿ ವಯಸ್ಕರ ಶಿಕ್ಷಣ ಹಾಗೂ ಸಾರ್ವಜನಿಕ ಗ್ರಂಥಾಲಯಗಳನ್ನು ಜನಪ್ರಿಯಗೊಳಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು ಹಾಗೂ ಇದಕ್ಕೆ ವಿನಿಯೋಗಿಸಲಿರುವ ಮೊತ್ತವೆಷ್ಟು?*

ಆ) *1995-96, 1996-97, 1997-98 ರಲ್ಲಿ ಇದ್ದ ಗುರಿ ಏನು ಹಾಗೂ ಸಾಧನೆಗಳೇನು? (ವಿವರ ನೀಡುವುದು)*

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :

ಅ) **ವಯಸ್ಕರ ಶಿಕ್ಷಣ**

ಸಂಪೂರ್ಣ ಸಾಕ್ಷರತಾ ಅಂದೋಲನ "ಕನ್ನಡ ನಾಡು ಸಾಕ್ಷರ ನಾಡು" ಅಂದೋಲನ, ಸಾಕ್ಷರೋತ್ತರ ಹಾಗೂ ಮುಂದುವರಿದ ಶಿಕ್ಷಣ ಕಾರ್ಯಕ್ರಮಗಳು. ಇದರಲ್ಲಿ ಕನ್ನಡನಾಡು ಮತ್ತು

ಸಾಕ್ಷರ ನಾಡು ಕಾರ್ಯಕ್ರಮಕ್ಕೆ ರೂ.635 ಲಕ್ಷಗಳು ಯೋಜನೆಯನ್ನು 1-11-1997 ರಿಂದ ಹಮ್ಮಿಕೊಳ್ಳಲಾಗಿದೆ.

ಗ್ರಂಥಾಲಯ

ರಾಜ್ಯದಲ್ಲಿರುವ ಕೇಂದ್ರ ಗ್ರಂಥಾಲಯಗಳನ್ನು ಅಭಿವೃದ್ಧಿಗೊಳಿಸುವ ಹಾಗೂ ಹೊಸದಾಗಿ ಸಾರ್ವಜನಿಕ ಗ್ರಂಥಾಲಯಗಳನ್ನು ರಾಜ್ಯದಲ್ಲಿನ ಕೆಲವು ಸ್ಥಳಗಳಲ್ಲಿ ಪ್ರಾರಂಭಿಸಲು ಮತ್ತು ಕೆಲವು ಗ್ರಂಥಾಲಯಗಳಿಗೆ ಸ್ವಂತ ಕಟ್ಟಡಗಳನ್ನು ಹೊಂದಲು ಯೋಜಿಸಲಾಗಿದೆ. 1998-99ರ ಸಾಲಿಗೆ ರೂ. 300.00 ಲಕ್ಷಗಳನ್ನು ಅನುವು ಮಾಡಿಕೊಳ್ಳಲಾಗಿದೆ.

ಅ) **ವಯಸ್ಕರ ಶಿಕ್ಷಣ**

ವರ್ಷ	ಗುರಿ	ಸಾಧನೆ
	(ಲಕ್ಷ ರೂ.ಗಳಲ್ಲಿ)	
1995-96 (ಮೈಸೂರು 2ನೇ ಹಂತ)	3.23	ಕಾರ್ಯ ಮುಗಿದಿದ್ದು, ಕಾರ್ಯ ಪ್ರಗತಿ ವರದಿ ನಿರೀಕ್ಷಿಸಲಾಗಿದೆ.
1996-97ನೇ (ಬೆಂಗಳೂರು ನಗರ)	1.28	ಪ್ರಗತಿಯಲ್ಲಿದೆ.
1997-98 (ಬೆಂಗಳೂರು ನಗರ ಕೊಳಚೆ ಪ್ರದೇಶ)	4.30	ಪ್ರಗತಿಯಲ್ಲಿದೆ.
ಕನ್ನಡ ನಾಡು ಸಾಕ್ಷರ ನಾಡು (ಪುನಶ್ಚೇತನ)	25.00	ಕಾರ್ಯ ಮುಗಿದಿದ್ದು, ಕಾರ್ಯಪ್ರಗತಿ ವರದಿ ನಿರೀಕ್ಷಿಸಲಾಗಿದೆ.

ಗ್ರಂಥಾಲಯ

ವರ್ಷ	ಗುರಿ	ಸಾಧನೆ
1995-96	3 ಸಂಚಾರಿ ಗ್ರಂಥಾಲಯಗಳ ಯೋಜನೆ	ಬೆಳಗಾಂ ಬಿಜಾಪುರ ಹಾಗೂ ಶಿವಮೊಗ್ಗ ನಗರಗಳಲ್ಲಿ ಸಂಚಾರಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ.

1	2	3
	100 ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಆರಂಭಿಸುವ ಯೋಜನೆ.	100 ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ.
1996-97	40 ತಾಲ್ಲೂಕು ಗ್ರಂಥಾಲಯಗಳನ್ನು ಅಭಿವೃದ್ಧಿ ಪಡಿಸುವ ಯೋಜನೆ.	40 ತಾಲ್ಲೂಕು ಗ್ರಂಥಾಲಯಗಳನ್ನು ಅಭಿವೃದ್ಧಿಪಡಿಸಲಾಗಿದೆ.
1997-98	3 ಸಂಚಾರಿ ಗ್ರಂಥಾಲಯ ಪ್ರಾರಂಭಿಸುವ ಯೋಜನೆ.	ಬೆಂಗಳೂರು ನಗರ ಜಿಲ್ಲೆ, ದಾವಣಗೆರೆ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಂಚಾರಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ.
	500 ಹೊಸ ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಪ್ರಾರಂಭಿಸುವ ಬಗ್ಗೆ.	500 ಹೊಸ ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

95-96ರಲ್ಲಿ ಪ್ರಾರಂಭಿಸಲಾದ100 (ಒಂದು ನೂರು) ಗ್ರಾಮ ಪಂಚಾಯಿತಿ ಗ್ರಂಥಾಲಯಗಳು

ಜಿಲ್ಲೆಗಳು	ಗ್ರಾಮ	ತಾಲ್ಲೂಕುಗಳು
1) ಶಿವಮೊಗ್ಗ	1) ಹಿರಿಯೂರು	ಭದ್ರಾವತಿ
	2) ಹೆಬ್ಬಳಗೆರೆ	ಚನ್ನಗಿರಿ
	3) ರಿಪ್ಪನ್‌ಪೇಟೆ	ಹೊಸನಗರ
	4) ಸಾಲೂರು	ಶಿಕಾರಿಪುರ
	5) ಆಯನೂರು	ಶಿವಮೊಗ್ಗ
2) ಕೋಲಾರ ಜಿಲ್ಲೆ	6) ಯಲ್ಲೂರು	ಶ್ರೀನಿವಾಸಪುರ
	7) ನೊಸಗೇರಿ	ಮಾಲೂರು
	8) ಗೊಲ್ಲಹಳ್ಳಿ	ಮುಳಬಾಗಿಲು
	9) ಕುರುಗಲ್	ಕೋಲಾರ

ಜಿಲ್ಲೆಗಳು	ಗ್ರಾಮ	ತಾಲ್ಲೂಕುಗಳು
	10) ಅವಲಗುರ್ಕಿ	ಚಿಕ್ಕಬಳ್ಳಾಪುರ
3) ಚಿತ್ರದುರ್ಗ ಜಿಲ್ಲೆ	11) ಪರಶುರಾಂಪುರ	ಚಳ್ಳಕೆರೆ
	12) ಕೆ. ಗೌರಸಮುದ್ರ	-"-
	13) ತೋರಣಗಟ್ಟಿ	ಜಗಳೂರು
	14) ವಿ.ವಿ.ಪುರ	ಹಿರಿಯೂರು
	15) ತನಗೀಹಳ್ಳಿ	ಹೊಳಲ್ಕೆರೆ
4) ಬೆಂಗಳೂರು	16) ತುಂಗಣಿ	ದೊಡ್ಡಬಳ್ಳಾಪುರ
(ಗ್ರಾಮಾಂತರ ಜಿಲ್ಲೆ)	17) ದೊಡ್ಡಮಾಲೂರು	ಚನ್ನಪಟ್ಟಣ
	18) ಕಲ್ಯಾಣ್	ಕನಕಪುರ
	19) ದೇವನಗುಂದಿ	ಹೊಸಕೋಟೆ
	20) ಹಣಬಿ	ದೊಡ್ಡಬಳ್ಳಾಪುರ
5) ಬೆಂಗಳೂರು (ನಗರ) ಜಿಲ್ಲೆ	21) ಅಗ್ರಹಾರ ಲೇಔಟ್	ಬೆಂ.ಉತ್ತರ
	22) ಚಂದಾಪುರ	ಆನೇಕಲ್ ತಾ.
	23) ವರಮಾವು	ಬೆ.ದಕ್ಷಿಣ ತಾ.
	24) ರಾಜನಕುಂಟೆ	ಬೆಂ.ಉತ್ತರ.
	25) ಕೊಟ್ಟಿಗೆರೆ (ನೇಕಾರನಗರ)	ಬೆಂ.ಉತ್ತರ
6) ತುಮಕೂರು ಜಿಲ್ಲೆ	26) ಶೆಟ್ಟಿಕೆರೆ	ಚಿಕ್ಕನಾಯ್ಕನಹಳ್ಳಿ
	27) ಗುಂಡಾಲದಹಳ್ಳಿ	ಪಾವಗಡ
	28) ಒನಸಕೆಟೆ	ತುಮಕೂರು
	29) ಸೀಬಿ ಅಗ್ರಹಾರ	ಶಿರಾ ತಾ.
	30) ಚಂದ್ರಶೇಖರ ಪುರ	ಗುಬ್ಬಿ ತಾ.
7) ಧಾರವಾಡ ಜಿಲ್ಲೆ	31) ಬನ್ನೂರು	ಶಿರಹಟ್ಟಿ ತಾ.
	32) ಬಮ್ಮಿಗಟ್ಟಿ	ಕಲಘಟಗಿ ತಾ.

ಜಿಲ್ಲೆಗಳು	ಗ್ರಾಮ	ತಾಲ್ಲೂಕುಗಳು
	33) ಚಿಕ್ಕನರಗುಂದ	ನರಗುಂದ ತಾ.
	34) ತಡಕೋಡ	ಧಾರವಾಡ ತಾ.
	35) ಸುಳ್ಯ	ಹುಬ್ಬಳ್ಳಿ ತಾ.
8) ಉತ್ತರ ಕನ್ನಡ ಜಿಲ್ಲೆ	36) ಗುಂಡಳ್ಳಿ	ಹಳಿಯಾಳ
	37) ಬೈರುಂಡೆ	ಶಿರಸಿ
	38) ಕೊಂಡೆಮನೆ	ಯಲ್ಲಾಪುರ
	39) ಅಂಗಡಿ	ಕಾರವಾರ ತಾ.
	40) ಅಮದಳ್ಳಿ	-"-
9. ಬೆಳಗಾಂ ಜಿಲ್ಲೆ	41) ಕಲಭಾವಿ	ಬೈಲಹೊಂಗಲ ತಾ.
	42) ಗೊಡಚಿ	ರಾಮದುರ್ಗ ತಾ.
	43) ಇಂಗಳಗಾಂವ	ಅಥಣಿ
	44) ಬಡಕುಂದ್ರಿ	ಹುಕ್ಕೇರಿ ತಾ.
	45) ನಗರಮಾನವಳ್ಳಿ	ಚಿಕ್ಕೋಡಿ
10. ಬಿಜಾಪುರ ಜಿಲ್ಲೆ	46) ಕನ್ನಾಳ	ಬಿಜಾಪುರ ತಾ.
	47) ಕುರಹಳ್ಳಿ	ಜಮಖಂಡಿ
	48) ತೆಲಗಿ	ಬಸವನಬಾಗೇವಾಡಿ ತಾ.
	49) ಲಚ್ಯಾಣ	ಇಂಡಿ
	50) ಕೆಲವಡಿ	ಬಾದಾಮಿ
11. ಬಳ್ಳಾರಿ ಜಿಲ್ಲೆ	51) ಕೊರ್ಲಗುಂದಿ	ಬಳ್ಳಾರಿ ತಾ.
	52) ದೇವಸಮುದ್ರ	ಹೊಸಪೇಟೆ
	53) ರಾರಾವಿ	ಸಿರಿಗುಪ್ಪ
	54) ಮೆಟ್ರಿಕಿ	ಸಂಡೂರು
	55) ಉತ್ತಂಗಿ	ಹಡಗಲಿ

ಜಿಲ್ಲೆಗಳು	ಗ್ರಾಮ	ತಾಲ್ಲೂಕುಗಳು
12)ರಾಯಚೂರು ಜಿಲ್ಲೆ	56) ಮೊಸರಕಲ್ಲು	ದೇವದುರ್ಗ
	57) ಹೆರೂರು	ಗಂಗಾವತಿ ತಾ.
	58) ಮತಲಾಪುರ	ಮಾನ್ವಿ ತಾ.
	59) ಸಿದ್ದಾಪುರ	ಲಿಂಗಸುಗೂರು
	60) ರಾಂಪುರ	ರಾಯಚೂರು ತಾ.
13) ಗುಲ್ಬರ್ಗಾ ಜಿಲ್ಲೆ	61) ನಾಲ್ವರ	ಚಿತ್ತಾಪುರ
	62) ಗಣಕೇಶ್ವರ	ಚಿಂಚೊಳ್ಳಿ
	63) ಬೆಳ್ಳರುಗಿ	ಅಬ್ದುಲ್‌ಪುರ
	64) ಸಗರ	ಷಹಾಪುರ
	65) ಅಳಂದ	ಖಜರಿ
14) ಬೀದರ್ ಜಿಲ್ಲೆ	66. ಇಡವಳ	ಹುಮ್ನಾಬಾದ್ ತಾ.
	67. ಬೆಳಕಲಿ ಚೌದರಿ	ಔರಾದ್ ತಾ.
	68. ಬೆಲ್ಲರಗಿ	ಬೀದರ್ ತಾ.
	69. ಬ್ಯಾಲಹಳ್ಳಿ	-"-
	70. ತಾಳಮಡಗಿ	ಹುಮ್ನಾಬಾದ್
15) ಮೈಸೂರು ಜಿಲ್ಲೆ	71) ಚಿಕ್ಕಳ್ಳಿ	ಗುಂಡ್ಲುಪೇಟೆ
	72) ಖಜನವಾಡು	ನಂಜನಗೂಡು
	73) ಸೋಮಲಾಪುರ	ಪಿರಿಯಾಪಟ್ಟಣ
	74) ಬನ್ನೂರು	ಟಿ. ನರಸೀಪುರ
	75) ತೆಪ್ಪಾರು	ಕೆ.ಆರ್. ನಗರ ತಾ.
16) ಹಾಸನ ಜಿಲ್ಲೆ	76) ಕೇರಳಾಪುರ	ಅರಕಲಗೂಡು
	77) ಕಣತೂರು	ಆಲೂರು
	78) ಹಾನಬಾಳ್	ಸಕಲೇಶಪುರಜ

ಜಿಲ್ಲೆಗಳು	ಗ್ರಾಮ	ತಾಲ್ಲೂಕುಗಳು
	79) ಮಾಡಲಹಿಪ್ಪೆ	ಹೊಳೆನರಸೀಪುರ
	80) ಬಾಗೂರು	ಚನ್ನರಾಯಪಟ್ಟಣ
17) ದಕ್ಷಿಣ ಕನ್ನಡ ಜಿಲ್ಲೆ	81) ಪಾಲಹಿಮರ	
	82) ಕೆಪ್ಪುಪಡ	
	83) ಪಡುವರಿ	
	84) ಕೂಚೂರು	
	85) ಅಧ್ಯಾರು	
18) ಮಂಡ್ಯ ಜಿಲ್ಲೆ	86. ಉಮ್ಮಡಹಳ್ಳಿ	ಮಂಡ್ಯ ತಾ.
	87) ಕೊಡಿಯಾಲ	ಶ್ರೀರಂಗಪಟ್ಟಣ
	88) ಬೆಳಕವಾಡಿ	ಮಳವಳ್ಳಿ ತಾ.
	89) ಸಿಂಧಘಟ್ಟ	ಕೆ.ಆರ್.ಪೇಟೆ
	90) ಕೆ ಎಂ ದೊಡ್ಡಿ	ಮದ್ದೂರು ತಾ.
19) ಚಿಕ್ಕಮಗಳೂರು ಜಿಲ್ಲೆ	91) ಹಿರೇನಲ್ಲೂರು	ಕಡೂರು
	92) ಬಕ್ಕಂಬುದಿ	ತರಿಕೆರೆ ತಾ.
	93) ಕ್ಯಾತನಬೀಡು	ಚಿಕ್ಕಮಗಳೂರು
	94) ಅಸಬದಗುರು	ಕೊಪ್ಪ
	95) ನಿಡುವಳಿ	ಮೂಡಿಗೆರೆ
20. ಮಡಿಕೇರಿ ಜಿಲ್ಲೆ	96. ಕರಿಕೆ	ಮಡಿಕೇರಿ
	97. ಕುಂದಚರಿ (ಚಟ್ಟಮನಿ)	-"-
	98) ಐಗೂರು	ಸೋಮವಾರಪೇಟೆ
	99) ನಂಜರಾಯಪಟ್ಟಣ	-"-
	100) ಕಣ್ಣಂಗಾಲು	ವಿರಾಜಪೇಟೆ

1996-97ರ ಸಾಲಿನಲ್ಲಿ ಅಭಿವೃದ್ಧಿಪಡಿಸಿದ 40 ತಾಲ್ಲೂಕು ಗ್ರಂಥಾಲಯಗಳ ಪಟ್ಟಿ

ಬೆಂಗಳೂರು ವಿಭಾಗ :

1.	ಬೆಂಗಳೂರು ನಗರ ಜಿಲ್ಲೆ	1) ಐ.ಟಿ.ಐ ಶಾಖೆ	2) ಆನೇಕಲ್ಲು
2.	ಬೆಂಗಳೂರು ಗ್ರಾಮಾಂತರ	1) ದೇವನಹಳ್ಳಿ	2) ರಾಮನಗರ
3.	ಚಿತ್ರದುರ್ಗ ಜಿಲ್ಲೆ	1) ಹೊಳಲಕೆರೆ	2) ಚಚ್ಚಿಗೆರೆ
4.	ಶಿವಮೊಗ್ಗ ಜಿಲ್ಲೆ	1) ತೀರ್ಥಹಳ್ಳಿ	2) ಸಾಗರ
5.	ಕೋಲಾರ ಜಿಲ್ಲೆ	1) ಶ್ರೀನಿವಾಸಪುರ	2) ಕೋಲಾರ
6.	ತುಮಕೂರು ಜಿಲ್ಲೆ	1) ತುಮಕೂರು	2) ಕುಣಿಗಲ್

ಮೈಸೂರು ವಿಭಾಗ :

7.	ಮೈಸೂರು ಜಿಲ್ಲೆ	1) ಕೆ.ಆರ್. ನಗರ	2) ಹುಣಸೂರು
8.	ಹಾಸನ ಜಿಲ್ಲೆ	1) ಹೊಳೆನರಸೀಪುರ	2) ಸಕಲೇಶಪುರ
9.	ಮಂಡ್ಯ ಜಿಲ್ಲೆ	1) ಮದ್ದೂರು	2) ಪಾಂಡವಪುರ
10.	ಮಡಿಕೇರಿ ಜಿಲ್ಲೆ	1) ಸೋಮವಾರಪೇಟೆ	2) ವೀರಾಜಪೇಟೆ
11.	ಚಿಕ್ಕಮಗಳೂರು ಜಿಲ್ಲೆ	1) ಮೂಡಗೆರೆ	2) ಕೊಪ್ಪ
12.	ಮಂಗಳೂರು ಜಿಲ್ಲೆ	1) ಕಾರ್ಕಳ	2) ಉಡುಪಿ

ಗುಲ್ಬರ್ಗಾ ವಿಭಾಗ :

13.	ಗುಲ್ಬರ್ಗಾ ಜಿಲ್ಲೆ	1) ಕಮಲಾಪುರ	2) ಯಾದಗಿರಿ
14.	ಬಳ್ಳಾರಿ ಜಿಲ್ಲೆ	1) ಹೂವಿನಹಡಗಲಿ	2) ಸಿರಗುಪ್ಪ
15.	ರಾಯಚೂರು ಜಿಲ್ಲೆ	1) ಕೊಪ್ಪಳ	2) ಗಂಗಾವತಿ
16.	ಬೀದರ್ ಜಿಲ್ಲೆ	1) ಹುಮ್ನಾಬಾದ್	2) ಬಸವಕಲ್ಯಾಣ

ಬೆಳಗಾಂ ವಿಭಾಗ :

17.	ಬೆಳಗಾಂ ಜಿಲ್ಲೆ	1) ಚಿಕ್ಕೋಡಿ	2) ರಾಮದುರ್ಗ
18.	ಕಾರವಾರ ಜಿಲ್ಲೆ	1) ಅಂಕೋಲಾ	2) ಹಳಿಯಾಳ
19.	ಧಾರವಾಡ ಜಿಲ್ಲೆ	1) ಸವಣೂರು	2) ಶಿಗ್ಗಾವಿ
20.	ಬಿಜಾಪುರ ಜಿಲ್ಲೆ	1) ಬಿಳಗಿ	2) ಮುಧೋಳ

1997-98ರ ಸಾಲಿನಲ್ಲಿ ಅಭಿವೃದ್ಧಿಪಡಿಸಿದ 40 ಶಾಖಾ ಗ್ರಂಥಾಲಯಗಳ ಪಟ್ಟಿ

ಬೆಂಗಳೂರು ವಿಭಾಗ :

1.	ಬೆಂಗಳೂರು ನಗರ ಜಿಲ್ಲೆ	1)	ವರ್ತೂರು (ಬಿ.ದ)	2) ಹೆಸರಘಟ್ಟ (ಬಿ.ಉ)
2.	ಬೆಂಗಳೂರು ಗ್ರಾಮಾಂತರ	1)	ನೆಲಮಂಗಲ	2) ಹೊಸಕೋಟೆ
3.	ಚಿತ್ರದುರ್ಗ ಜಿಲ್ಲೆ	1)	ಹಿರಿಯೂರು	2) ಜಗಳೂರು
4.	ಶಿವಮೊಗ್ಗ ಜಿಲ್ಲೆ	1)	ಭದ್ರಾವತಿ	2) ಶಿಕಾರಿಪುರ
5.	ಕೋಲಾರ ಜಿಲ್ಲೆ	1)	ಬಂಗಾರಪೇಟೆ	2) ಚಿಕ್ಕಬಳ್ಳಾಪುರ
6.	ತುಮಕೂರು ಜಿಲ್ಲೆ	1)	ಗುಬ್ಬಿ	2) ಸಿರಾ

ಮೈಸೂರು ವಿಭಾಗ :

7.	ಮೈಸೂರು ಜಿಲ್ಲೆ	1)	ಚಾಮರಾಜ ನಗರ	2) ಕೊಳ್ಳೇಗಾಲ
8.	ಹಾಸನ ಜಿಲ್ಲೆ	1)	ಚನ್ನರಾಯಪಟ್ಟಣ	2) ಅರಸೀಕೆರೆ
9.	ಮಂಡ್ಯ ಜಿಲ್ಲೆ	1)	ಕೆ.ಆರ್.ಪೇಟೆ	2) ಶ್ರೀರಂಗಪಟ್ಟಣ
10.	ಮಡಿಕೇರಿ ಜಿಲ್ಲೆ	1)	ಮಡಿಕೇರಿ	
11.	ಚಿಕ್ಕಮಗಳೂರು ಜಿಲ್ಲೆ	1)	ಕಡೂರು	2) ಚಿಕ್ಕಮಗಳೂರು
12.	ಮಂಗಳೂರು ಜಿಲ್ಲೆ	1)	ಪುತ್ತೂರು	2) ಬಂಟವಾಳ

ಗುಲ್ಬರ್ಗಾ ವಿಭಾಗ :

13.	ಗುಲ್ಬರ್ಗಾ ಜಿಲ್ಲಾ	1)	ಶಹಪುರ	2) ಸುರಪುರ
14.	ಬಳ್ಳಾರಿ ಜಿಲ್ಲೆ	1)	ಹರಪ್ಪನಹಳ್ಳಿ	2) ಸೊಂಡೂರು
15.	ರಾಯಚೂರು ಜಿಲ್ಲೆ	1)	ಸಿಂಧನೂರು	2) ರಾಯಚೂರು
16.	ಬೀದರ ಜಿಲ್ಲೆ	1)	ಬಾಲ್ಕಿ	2) ಬೀದರ್

ಬೆಳಗಾಂ ವಿಭಾಗ :

17.	ಬೆಳಗಾಂ ಜಿಲ್ಲೆ	1)	ಸವದತ್ತಿ	2) ಬೈಲಹೊಂಗಲ
18.	ಕಾರವಾರ ಜಿಲ್ಲೆ	1)	ಹೊನ್ನಾವರ	2) ಸಿರಸಿ
19.	ಧಾರವಾಡ ಜಿಲ್ಲೆ	1)	ಮುಂಡರಗಿ	2) ಗದಗ
20.	ಬಿಜಾಪುರ ಜಿಲ್ಲೆ	1)	ಬಸವನಬಾಗೇವಾಡಿ	2) ಇಂಡಿ, ಬಾಗಲಕೋಟೆ.

ಶ್ರೀ ಎನ್ ಯೋಗೀಶ್ ಭಟ್ : ಮಾನ್ಯ ಉಪಾಧ್ಯಕ್ಷರೆ, ಕೊಟ್ಟಿರುವಂತಹ ಉತ್ತರದಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುವುದಕ್ಕೆ ಇಷ್ಟ ಪಡುತ್ತೇನೆ. ವಿಶೇಷವಾಗಿ ಎಷ್ಟೋ ಲೈಬ್ರರಿಗಳ ಕಟ್ಟಡಗಳೂ ಇವತ್ತಿಗೂ ಸೋರುತ್ತಿವೆ. ಅಲ್ಲಿ ಯಾವುದೇ ರೀತಿಯ ಪುಸ್ತಕ ಇಡುವಂತಹ ಸುರಕ್ಷಿತವಾದ ಕಟ್ಟಡ ಇಲ್ಲ. ಅದೇ ರೀತಿ ಯಾವುದೇ ಪೀಠೋಪಕರಣಗಳೂ ಕೂಡ ವ್ಯವಸ್ಥಿತವಾಗಿ ನಮಗೆ ಸಿಗದೇ ಇರುವುದರಿಂದ ರಾಜ್ಯದ ಅನೇಕ ಲೈಬ್ರರಿಗಳು ಈ ಸಮಸ್ಯೆ ಎದುರಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯಾ? ಅದನ್ನು ದುರಸ್ತಿಗೊಳಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಇದರ ಬಗ್ಗೆ ವಿವರಣೆ ಕೊಡಿ.

12.00 ಪಿ.ಎಂ

ಶ್ರೀ ಆರ್. ಕೃಷ್ಣಪ್ಪ : ಸನ್ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಇದಕ್ಕಾಗಿ ಒಟ್ಟಾರೆ 196 ಲಕ್ಷ ರೂಪಾಯಿಗಳನ್ನು ಇಡಲಾಗಿದ್ದು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ತಾಲ್ಲೂಕು ಮಟ್ಟದ ಶಾಖಾ ಗ್ರಂಥಾಲಯಗಳ ಸೇವೆಯನ್ನು ಉತ್ತಮ ಪಡಿಸುವುದು, ರಾಜ್ಯ ಕೇಂದ್ರ ಗ್ರಂಥಾಲಯಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಮಂಡಲ ಗ್ರಂಥಾಲಯಗಳನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ನಾವು ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದೇವೆ. ಇದಲ್ಲದೆ ಇದಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ತುರ್ತಾಗಿ ಆಗಬೇಕಾಗಿದ್ದರೆ ಅದರ ಬಗ್ಗೆ ನಮ್ಮ ಗಮನಕ್ಕೆ ತಂದರೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇವೆ.

ಶ್ರೀ ಎನ್ ಯೋಗೀಶ್ ಭಟ್ : ಸನ್ಮಾನ್ಯ ಉಪಾಧ್ಯಕ್ಷರೆ, ಮಂತ್ರಿಗಳು ಈ ಹಿಂದೆ ಮಂಗಳೂರಿನಂಥ ನಗರ ಪ್ರದೇಶದಲ್ಲಿ ಇಂಟರ್‌ನೆಟ್ ಸೌಲಭ್ಯವನ್ನು ಕೊಡುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದರು. ಮಂಗಳೂರು ಕ್ಷೇತ್ರಕ್ಕೆ ಬಂದಾಗ 20 ಲಕ್ಷ ರೂ.ಗಳನ್ನು ಖರ್ಚು ಮಾಡಿ ಕಟ್ಟಡವನ್ನು ಕಟ್ಟಿಸುವುದಾಗಿ ಪ್ರಾಮಿಸ್ ಮಾಡಿದ್ದರು. ಆದರೆ ಇದುವರೆಗೂ ಅದು ಅನುಷ್ಠಾನಕ್ಕೆ ಬಂದಿಲ್ಲ. ಆದರೆ ಯಾವಾಗ ಅದನ್ನು ಮಾಡಬಹುದು. ಮತ್ತು ಯಾವಾಗ ಅದನ್ನು ಮಾಡಿಸುತ್ತೀರಿ ಎಂಬ ಬಗ್ಗೆ ನಿಶ್ಚಿತವಾದ ಉತ್ತರವನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಂದ ಪಡೆಯಲಿಚ್ಚಿಸುತ್ತೇನೆ.

ಶ್ರೀ ಆರ್. ಕೃಷ್ಣಪ್ಪ : ಅದರ ನಕ್ಷೆ ಮತ್ತು ಗುರುತಿಸಲ್ಪಟ್ಟ ಸ್ಥಳದ ಬಗ್ಗೆ ನಮಗೆ ಮಾಹಿತಿ ಗೊತ್ತಿಲ್ಲ. ಆ ಮಾಹಿತಿ ದೊರೆತ ತಕ್ಷಣ ನಾವು ಕಾರ್ಯ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಕೆ. ಜಯರಾಮಶೆಟ್ಟಿ : ಈ ಗ್ರಂಥಾಲಯಗಳಿಗೆ ಪುಸ್ತಕವನ್ನು ಖರೀದಿ ಮಾಡುವಾಗ ಯಾವ ಮಾನದಂಡವನ್ನು ಉಪಯೋಗ ಮಾಡಲಾಗುತ್ತದೆ? ಓದುಗರ ವಿಚಾರವನ್ನು ನೀವು ತೆಗೆದುಕೊಂಡು ನೀವು ಪುಸ್ತಕವನ್ನು ಖರೀದಿಸುತ್ತೀರಾ ಅಥವಾ ನಿಮ್ಮ ಆಸಕ್ತಿಯ ಮೇಲೆ ಖರೀದಿ ಮಾಡುತ್ತೀರಾ? ಏಕೆಂದರೆ ಬಹಳಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಅಲ್ಲಿಯ ಓದುಗರ ಹಿತವನ್ನು ಗಮನಕ್ಕೆ ತೆಗೆದುಕೊಳ್ಳದೆ ಅವರಿಗೆ ಓದಿ ಜೀರ್ಣಿಸಿಕೊಳ್ಳಲಾಗದಂಥ ಪುಸ್ತಕವನ್ನು ನೀವು ಖರೀದಿ ಮಾಡಿಕೊಡುತ್ತಿದ್ದೀರಿ ಎಂಬುದು ನನ್ನ ಗಮನಕ್ಕೆ ಬಂದಿದೆ.

ಶ್ರೀ ಆರ್. ಕೃಷ್ಣಪ್ಪ : ಸನ್ಮಾನ್ಯ ಉಪಾಧ್ಯಕ್ಷರೆ, ಪುಸ್ತಕಗಳನ್ನು ಖರೀದಿ ಮಾಡುವ ಸಲುವಾಗಿ ಶಿಫಾರಸ್ಸು ಮಾಡುವುದಕ್ಕಾಗಿ ಅಕ್ಬರ್ ಅಲಿ ಸಮಿತಿ ಇದೆ. ಅವರ ಆಯ್ಕೆಯ ಪ್ರಕಾರ ಆಯಾಯ ಜಿಲ್ಲಾ

ಅಧಿಕಾರಿಗಳು ಹಳ್ಳಿಗಳಿಗೆ ಅನುಗುಣವಾಗಿ ಪುಸ್ತಕವನ್ನು ಖರೀದಿ ಮಾಡಿಕೊಡುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ.

ವಿಕ್ಟೋರಿಯ ಆಸ್ಪತ್ರೆಯಲ್ಲಿ ಹೃದ್ರೋಗ ಚಿಕಿತ್ಸಾ ಘಟಕ.

149 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೃದ್ರೋಗ ಚಿಕಿತ್ಸಾ ಘಟಕ ಇದೆಯೇ?*

ಆ) *ಇದ್ದಲ್ಲಿ ಹೃದ್ರೋಗ ತಜ್ಞರನ್ನು ನೇಮಕಾತಿ ಮಾಡಲಾಗಿದೆಯೇ?*

ಇ) *ಇಲ್ಲದಿದ್ದಲ್ಲಿ ವಿಕ್ಟೋರಿಯ ಆಸ್ಪತ್ರೆಯಲ್ಲಿ ಹೃದ್ರೋಗ ಚಿಕಿತ್ಸಾ ಘಟಕ ಸ್ಥಾಪಿಸಲು ಸರ್ಕಾರದವರು ಪರಿಶೀಲಿಸುವರೆ?*

ಡಾ|| ಎಂ. ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಹೌದು.

ಆ) ಹೌದು.

ಇ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ನಾನು ಕೇಳಿರುವುದೇನೆಂದರೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೃದ್ರೋಗ ಚಿಕಿತ್ಸಾ ಘಟಕ ಇದೆಯೇ ಎಂದು ಕೇಳಿರುವುದಕ್ಕೆ ಇವರು ಉತ್ತರದಲ್ಲಿ ಇದೆ ಎಂದು ಹೇಳಿದ್ದಾರೆ. ಆದರೆ ನನಗೆ ತಿಳಿದಿರುವಂತೆ ಅಲ್ಲಿ ಅಂದರೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೃದ್ರೋಗ ಚಿಕಿತ್ಸಾ ಘಟಕ ಇಲ್ಲ, ಬಹುಶಃ ಆ ಕಾಂಪೌಂಡನಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆ ಇರುವುದರಿಂದ ಆ ರೀತಿ ಹೇಳಿದ್ದಾರೇನೋ ನನಗಂತೂ ಗೊತ್ತಿಲ್ಲ. ಆದರೆ ಇಲ್ಲಿ ಒಂದು ಸತ್ಯವಿದೆ. ಏನೆಂದರೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೃದ್ರೋಗ ಚಿಕಿತ್ಸಾ ಘಟಕ ಇಲ್ಲದಿದ್ದರೂ ಕೂಡ ಅಲ್ಲಿ ಒಬ್ಬ ಹೃದ್ರೋಗ ವೈದ್ಯರನ್ನು ಮಾತ್ರ ನೇಮಕ ಮಾಡಿದ್ದಾರೆ. ಆತನ ಕೆಲಸವೇನೆಂದರೆ ಮೆಡಿಸನನ್ನು ಮಾಡತಕ್ಕಂಥದ್ದು. ವಿಕ್ಟೋರಿಯಾ ಆಸ್ಪತ್ರೆ ಸಾಮಾನ್ಯ ಜನರು ಹೋಗತಕ್ಕಂಥ, ಬಡ ಜನರು ಹೋಗತಕ್ಕಂಥ ಒಂದು ಪ್ರಮುಖವಾದ ಹಳೆಯ ಆಸ್ಪತ್ರೆಯಾಗಿದೆ. ಇಲ್ಲಿ ಹೃದ್ರೋಗ ಚಿಕಿತ್ಸಾ ಘಟಕವನ್ನು ಸ್ಥಾಪನೆ ಮಾಡಿದ್ದೇವೆ ಎಂದಿರುವ ವಿಷಯ ಸತ್ಯಕ್ಕೆ ದೂರವಾದ ವಿಷಯವಾಗಿದೆ. ಇದರ ನಿಜಾಂಶವೇನು ಎಂಬ ಬಗ್ಗೆ ಮಂತ್ರಿಯವರು ಹೇಳಬೇಕು. ಅಲ್ಲಿ ಏನು ಒಬ್ಬ ಡಾಕ್ಟರ್ ಇದ್ದಾರೆ ಅವರಿಗೆ ಹೃದ್ರೋಗ ಚಿಕಿತ್ಸೆ ಮಾಡತಕ್ಕಂಥ ಕೆಲಸ ಅವರಿಗೆ ಕೊಟ್ಟಿಲ್ಲ. ಅವರು ಬೇರೆ ಏನೋ ಕೆಲಸವನ್ನು ಮಾಡಿಕೊಂಡು ಅಲ್ಲಿದ್ದಾರೆ. ಅದು ಏನು ಎಂಬ ಬಗ್ಗೆ ಸರಿಯಾದಂಥ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಡಾ. ಎಂ. ಶಂಕರ್‌ನಾಯಕ್ : ಮಾನ್ಯ ಉಪಾಧ್ಯಕ್ಷರೇ, ಪ್ರತಿಯೊಂದು ಮೆಡಿಕಲ್ ಕಾಲೇಜಿನಲ್ಲಿ ಒಂದು ಮೆಡಿಸನ್ ಡಿಪಾರ್ಟ್‌ಮೆಂಟ್ ಎಂದು ಇರುತ್ತದೆ. ಅವರೇ ಹೃದಯ ಕಾಯಿಲೆ